ಮೂಲ ದಾವಾ ಸಂಖ್ಯೆ. 131/2017 ಡಿ ಡಬ್ಲ್ಯೂ 2

(ದಿನಾಂಕ 28-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

1ನೇ ಪ್ರತಿವಾದಿ ನನಗೆ ಸಂಬಂಧಿಕನಲ್ಲ. ಈ ದಾವೆಯನ್ನು 1ನೇ ಪ್ರತಿವಾದಿಯ ಸಹೋದರ ದಾಖಲಿಸಿದ್ದಾನೆ. ಜಮೀನಿನಲ್ಲಿ ನನಗೆ ಭಾಗ ಬೇಕು ಅಂತಾ ಈ ದಾವೆ ದಾಖಲಿಸಿದ್ದಾನೆ. ವಾದಿಗೆ ನನ್ನ ಪ್ರಕಾರ ದಾವಾಸ್ತಿಯಲ್ಲಿ ಯಾವುದೇ ಭಾಗ ಇಲ್ಲ. ವಾದಿ ಪ್ರತಿವಾದಿಯರು ವಿಭಾಗವಾಗಿದ್ದಾರಾ ಅಥವಾ ಇಲ್ಲವೆಂದರೆ ಸಾಕ್ಷಿಯು ನಾನು ವಾದಿಯನ್ನು ನೋಡಿಲ್ಲ 1ನೇ ಪ್ರತಿವಾದಿ 40 ವರ್ಷದಿಂದ ನಮ್ಮ ಊರಿಗೆ ಬಂದು ವಾಸವಾಗಿದ್ದಾರೆನ್ನುತ್ತಾರೆ. ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ನನಗೆ ವಾದಿ ಗೊತ್ತಿಲ್ಲ ಅವರು ಭಾಗವಾಗಿದ್ದಾರಾ ಇಲ್ಲವೆನ್ನುವುದು ನನಗೆ ಗೊತ್ತಿಲ್ಲ 1ನೇ ಪ್ರತಿವಾದಿ ಮಾತ್ರ ನನಗೆ ಗೊತ್ತು ಎನ್ನುತ್ತಾರೆ. 1ನೇ ಪ್ರತಿವಾದಿ ಮತ್ತು ನಾನು ಆತ್ಮೀಯರು ಎಂದರೆ ಸರಿ. 1ನೇ ಪ್ರತಿವಾದಿ ಹೇಳಿದ್ದಾರಂತಾ ನಾನು ಸಾಕ್ಷಿ ಹೇಳಲು ಬಂದಿದ್ದೇನೆಂದರೆ ಸಾಕ್ಷಿಯು ನಾವು ಅಲ್ಲೇ ಇರುತ್ತೇವೆ ಆದ್ದರಿಂದ ಬಂದಿದ್ದೇನೆ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ 1ನೇ ಪ್ರತಿವಾದಿ ಹೇಳಿದಂತೆ ನಾನು ಸಾಕ್ಷ್ಯ ಪ್ರಮಾಣಪತ್ರಕ್ಕೆ ಸಹಿ ಮಾಡಿದ್ದೇನೆಂದರೆ ಸರಿ ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿ ಜಮೀನು ಖರೀದಿ ಮಾಡಿದ್ದು ನನಗೆ ಗೊತ್ತು ಎನ್ನುತ್ತಾರೆ.

1ನೇ ಪ್ರತಿವಾದಿಯು ಹೊಸಮನಿ ಸಿದ್ದಪ್ಪ ಇವರಿಂದ ಜಮೀನು ಖರೀದಿ ಮಾಡಿದ್ದಾನೆ. ಖರೀದಿ ಸಮಯದಲ್ಲಿ ನಾನು ಹಾಜರಿದ್ದೆ. ಖರೀದಿ ದಾಖಲೆಗೆ ಸಾಕ್ಷಿ ಅಂತಾ ಸಹಿ ಮಾಡಿಲ್ಲ. ಖರೀದಿ ಸಮಯದಲ್ಲಿ ಎಷ್ಟು ಜನರಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. 1ನೇ ಪ್ರತಿವಾದಿಯು ಜಮೀನು ಖರೀದಿ ಮಾಡಿದ್ದಾರಂತಾ ಹೇಳುವ ಸಮಯದಲ್ಲಿ ನಾನು ಹಾಜರಿರಲಿಲ್ಲ 1ನೇ ಪ್ರತಿವಾದಿ ನನಗೆ ಸಾಕ್ಷಿ ಹೇಳಲು ಕರೆದುಕೊಂಡು ಬಂದಿದ್ದರಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

1ನೇ ಪ್ರತಿವಾದಿಗೆ ಮಲ್ಲಪ್ಪ, ಸಿದ್ದಪ್ಪ ಸಹೋದರರು ಇರುತ್ತಾರೆ. 1ನೇ ಪ್ರತಿವಾದಿಯ ತಂದೆಯ ಹೆಸರು ಕೆಂಚಪ್ಪ. ಅವರನ್ನು ನಾನು ನೋಡಿದ್ದೇನೆ ಅವರು ಮುಟುಕನಹಳ್ಳಿ ಗ್ರಾಮದಲ್ಲಿದ್ದರು. 1ನೇ ಪ್ರತಿವಾದಿ ಜಮೀನು ಖರೀದಿಸಿದ ಸಮಯದಲ್ಲಿ ಅವರ ತಂದೆ ಇದ್ದರು ಅವರಿಗೆ ವಯಸ್ಸು ಬಹಳವಾಗಿತ್ತು. 1ನೇ ಪ್ರತಿವಾದಿಯ ತಂದೆಗೆ ವಯಸ್ಸಾಗಿದ್ದರಿಂದ 1ನೇ

ಮೂಲ ದಾವಾ ಸಂಖ್ಯೆ. 131/2017 ಡಿ ಡಬ್ಲ್ಯೂ 2

ಪ್ರತಿವಾದಿಯು ತನ್ನ ಸಹೋದರ ಸಹೋರಿಯರನ್ನು ಚೆನ್ನಾಗಿ ನೋಡಿಕೊಂಡಿರುವುದರಿಂದ ಅವರ ತಂದೆ 1ನೇ ಪ್ರತಿವಾದಿ ಹೆಸರಿಗೆ ಜಮೀನನ್ನು ಖರೀದಿ ಮಾಡಿರುತ್ತಾರೆಂದರೆ ಇರಬಹುದು. 1ನೇ ಪ್ರತಿವಾದಿಯು ಕುಟುಂಬದ ಪರವಾಗಿ ಜಮೀನು ಖರೀದಿಸಿದ್ದರೂ ಸಹಾ 1ನೇ ಪ್ರತಿವಾದಿಯ ಮಾತನ್ನು ಕೇಳಿಕೊಂಡು 1ನೇ ಪ್ರತಿವಾದಿಯು ಸದರಿ ಜಮೀನನ್ನು ಸ್ವಂತಾಗಿ ಖರೀದಿಸಿರುತ್ತಾರಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ 1ನೇ ಪ್ರತಿವಾದಿ ಮತ್ತು ಅವರ ಸಹೋದರ ಸಹೋದರಿಯರಿಗೆ ಸಮಪಾಲು ಇದ್ದರೂ ಸಹಾ ನಾನು 1ನೇ ಪ್ರತಿವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ